# ಮೈಸೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಸಂಖ್ಯೆ: ಯುಎ-1/769/2018-19

ದಿನಾಂಕ 28-03-2019

ಶಿಕ್ಷಣ ಮಂಡಳಿ ಸದಸ್ಯರುಗಳಿಗೆ,

ಮಾನ್ಯರೆ,

ವಿಷಯ: ದಿನಾಂಕ: 17-03-2019ರಂದು ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಯನ್ನು ಕಳುಹಿಸುವ ಬಗ್ಗೆ.

* * * * *

ವಿಶ್ವವಿದ್ಯಾನಿಲಯದ ತೊಂಬತ್ತೊಂಬತನೇ ವಾರ್ಷಿಕ ಘಟಿಕೋತ್ಸವದ ಪೂರ್ವಾಭಾವಿಯಾಗಿ, ದಿನಾಂಕ 17-03-2019ರಂದು ಬೆಳಿಗ್ಗೆ 8-30 ಗಂಟೆಗೆ, ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ನಡೆದ, ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿಗಳ ಪ್ರತಿಯನ್ನು ತಮ್ಮ ಮಾಹಿತಿಗಾಗಿ ಈ ಮೂಲಕ ಕಳುಹಿಸಿಕೊಡಲಾಗಿದೆ, ನಡವಳಿಯಲ್ಲಿ ಹೇಳಿರುವ ಯಾವುದೇ ಅಂಶದ ಯಥಾರ್ಥತೆಯ ಬಗ್ಗೆ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳಿಂದ ನಡವಳಿಗಳನ್ನು ಕಳುಹಿಸಿದ ದಿನಾಂಕದಿಂದ 21 ದಿನಗಳ ಒಳಗಾಗಿ ಆಕ್ಷೇಪಣೆ ಬಾರದಿದ್ದಲ್ಲಿ, ನಡವಳಿಯಲ್ಲಿ ಹೇಳಿರುವ ಎಲ್ಲಾ ಅಂಶಗಳು ಸರಿಯಾಗಿವೆ ಎಂದು ಪರಿಗಣಿಸಲ್ಪಡುತ್ತವೆ. ಆದುದರಿಂದ, ನಡವಳಿಯ ಬಗ್ಗೆ ನಿಮ್ಮ ಆಕ್ಷೇಪಣೆ(ಗಳು) ಏನಾದರೂ ಇದ್ದಲ್ಲಿ, ಈ ಬಗ್ಗೆ "ಕುಲಸಚಿವರು, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು" ಇವರನ್ನು ಉದ್ದೇಶಿಸಿ ಬರೆದ ಪತ್ರವನ್ನು ದಿನಾಂಕ 15-04-2019ರ ಒಳಗಾಗಿ, ವಿಶೇಷಾಧಿಕಾರಿಗಳು, ಸಿಂಡಿಕೇಟ್ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಕ್ರಾಫರ್ಡ್‌ಭವನ, ಮೈಸೂರು-570 005 ಇವರಿಗೆ ನೇರವಾಗಿ ತಲುಪಿಸುವಂತೆ ಕೋರಲಾಗಿದೆ.

ತಮ್ಮ ನಂಬುಗೆಯ

28/3/19

ವಿಶೇಷಾಧಿಕಾರಿ(ಪ್ರಾಧಿಕಾರ)

ಪ್ರತಿ:

1. ಘನತೆವೆತ್ತ ರಾಜ್ಯಪಾಲರ ಕಾರ್ಯದರ್ಶಿಗಳು, ರಾಜಭವನ, ಬೆಂಗಳೂರು – ಘನತೆವೆತ್ತ ರಾಜ್ಯಪಾಲರ ಅವಗಹಾನೆಗೆ ತರಬೇಕಾಗಿ ಕೋರಲಾಗಿದೆ.
2. ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ವಿಶ್ವವಿದ್ಯಾನಿಲಯ), ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಕುಲಸಚಿವರು(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ನಿರ್ದೇಶಕರು, ಪಿ.ಎಂ.ಇ.ಬಿ/ ಕಾಲೇಜು ಅಭಿವೃದ್ಧಿ ಮಂಡಳಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ನಿರ್ದೇಶಕರು, ವಿದ್ಯಾರ್ಥಿಕ್ಷೇಮಪಾಲನ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು.
6. ಎಲ್ಲಾ ಉಪಕುಲಸಚಿವರು/ಸಹಾಯಕ ಕುಲಸಚಿವರು(ಶೈಕ್ಷಣಿಕ/ಆಡಳಿತ/ಅಭಿವೃದ್ಧಿ/ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿಶೇಷ ಘಟಕ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
7. ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
8. ಕಛೇರಿ ಪ್ರತಿ.

**AC Forwarding letter**

# ಮೈಸೂರು ವಿಶ್ವವಿದ್ಯಾನಿಲಯ

ದಿನಾಂಕ: 17-03-2019ರಂದು ಬೆಳಿಗ್ಗೆ 8.30 ಗಂಟೆಗೆ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆದ ಶಿಕ್ಷಣ ಮಂಡಳಿಯ ವಿಶೇಷ ಸಭೆಯ ನಡವಳಿ.

ಸಭೆಗೆ ಹಾಜರಾದ ಸದಸ್ಯರುಗಳು

1. ಪ್ರೊ. ಜಿ. ಹೇಮಂತ ಕುಮಾರ್, ಕುಲಪತಿಗಳು ... ಅಧ್ಯಕ್ಷರು
2. ಶ್ರೀ.ಅಪ್ಪಾಜಿಗೌಡ, ವಿಧಾನ ಪರಿಷತ್ ಸದಸ್ಯರು ... ಸದಸ್ಯರು
3. ಡಾ.ಎಂ.ಸಿ.ನಟರಾಜ ... ಸದಸ್ಯರು
4. ಶ್ರೀ ಶಾಂತಕುಮಾರ. ಕೆ ... ಸದಸ್ಯರು
5. ಶ್ರೀಮತಿ ಎಂ.ಎನ್.ಪೊನ್ನಮ್ಮ ... ಸದಸ್ಯರು
6. ಶ್ರೀ.ಜಿ.ಅಶ್ವತ್ಥ್ ನಾರಾಯಣ ... ಸದಸ್ಯರು
7. ಶ್ರೀ.ಕುಮಾರ್ ... ಸದಸ್ಯರು
8. ಡಾ.ಎಂ.ಪ್ರೀತಿ ... ಸದಸ್ಯರು
9. ಡಾ.ರಾಜಗೋಪಾಲ್ ... ಸದಸ್ಯರು
10. ಪ್ರೊ. ಹೆಚ್.ಟಿ.ಬಸವರಾಜಪ್ಪ ... ಸದಸ್ಯರು
11. ಪ್ರೊ.ಎಸ್.ಎಲ್. ಬೆಳಗಲಿ ... ಸದಸ್ಯರು
12. ಪ್ರೊ. ಜಿ. ನಾಗೇಂದ್ರಪ್ಪ ... ಸದಸ್ಯರು
13. ಪ್ರೊ. ಡಿ. ಆನಂದ ... ಸದಸ್ಯರು
14. ಡಾ. ಎಸ್.ಮದಿಅಳಗನ್ ... ಸದಸ್ಯರು
15. ಶ್ರೀ ನಾಗೇಶ್ ಕರಿಯಪ್ಪ ... ಸದಸ್ಯರು
16. ಶ್ರೀ ರಘು ಸಿ ಎಸ್ ... ಸದಸ್ಯರು
17. ಶ್ರೀ ಬೆಳವಾಡಿ ಪ್ರಭಾಕರ ... ಸದಸ್ಯರು
18. ಡಾ.ಪಿ. ಸರಸ್ವತಿ, ಗ್ರಂಥಪಾಲಕರು ... ಸದಸ್ಯರು
19. ಪ್ರೊ. ಸಿ. ರಾಮಸ್ವಾಮಿ, ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ ... ಸದಸ್ಯರು
20. ಡಾ.ಎಸ್. ಶ್ರೀಕಂಠಸ್ವಾಮಿ, ನಿರ್ದೇಶಕರು, ಕಾಲೇಜು ಅಭಿವೃದ್ಧಿ ಮಂಡಳಿ ... ಸದಸ್ಯರು
21. ಪ್ರೊ. ಯಶವಂತ ಡೋಂಗ್ರೆ, ನಿರ್ದೇಶಕರು, ಪಿ.ಎಂ.ಇ.ಬಿ. ... ಸದಸ್ಯರು
22. ಡಾ.ಪಿ.ಕೃಷ್ಣಯ್ಯ, ನಿರ್ದೇಶಕರು, ದೈಹಿಕ ಶಿಕ್ಷಣ ವಿಭಾಗ ... ಸದಸ್ಯರು
23. ಪ್ರೊ. ಕೆ. ಎಂ. ಮಹದೇವನ್ ಕುಲಸಚಿವ(ಪರೀಕ್ಷಾಂಗ) ... ಸದಸ್ಯರು
24. ಪ್ರೊ.ಬಿ.ಮಹದೇವಪ್ಪ, ಹಣಕಾಸು ಅಧಿಕಾರಿಗಳು ... ಸದಸ್ಯರು
25. ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವರು ... ಸದಸ್ಯ ಕಾರ್ಯದರ್ಶಿ

ವಿಶೇಷ ಆಹ್ವಾನಿತರು

26. ಪ್ರೊ. ಮಹದೇವ
27. ಪ್ರೊ. ಸಿ. ಬಸವರಾಜು
28. ಪ್ರೊ. ಸದಾನಂದ ಎಂ ಯಮಕನಮರಡಿ

ಸಭೆಗೆ ಹಾಜರಾಗದವರು

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ, ಕರ್ನಾಟಕ ಸರ್ಕಾರ
2. ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ
3. ಶ್ರೀ ಕೆ. ಟಿ. ಶ್ರೀಕಂಠೇಗೌಡ, ವಿಧಾನ ಪರಿಷತ್ ಸದಸ್ಯರು
4. ಡಾ.ಪಿ.ಎಸ್.ಸುರೇಶ್
5. ಡಾ. ವಿ. ಶಿವಪ್ರಸಾದ್
6. ಶ್ರೀ ಜೆ.ಯು. ಚನ್ನಬಸಪ್ಪ
7. ಪ್ರೊ. ಎನ್. ಎಂ. ತಳವಾರ್
8. ಪ್ರೊ. ಶಿವಬಸವಯ್ಯ

ಮೊದಲಿಗೆ ಮಾನ್ಯ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದ ಪೂರ್ವಭಾವಿಯಾಗಿ ಸಮಾವೇಶಗೊಂಡ ಶಿಕ್ಷಣ ಮಂಡಳಿಯ ವಿಶೇಷ ಸಭೆಗೆ ಎಲ್ಲಾ ಮಾನ್ಯ ಸದಸ್ಯರಿಗೂ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು.

ಮೈಸೂರು ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದ ಅಧ್ಯಕ್ಷತೆಯನ್ನು ಸನ್ಮಾನ್ಯ ಶ್ರೀ ಜಿ.ಟಿ ದೇವೇಗೌಡ ಉನ್ನತ ಶಿಕ್ಷಣ ಸಚಿವರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಸಮಕುಲಾಧಿಪತಿಗಳು ಇವರು ವಹಿಸಿಸುವರು, ಪ್ರೊ. ಅನಿಲ್ ಡಿ. ಸಹಸ್ರಬುಧೆ, ಅಧ್ಯಕ್ಷರು, ಎ.ಐ.ಸಿ.ಟಿ.ಇ,. ನವದೆಹಲಿ ಹಾಗೂ ಸಿಂಗಾಪುರ್ ನಾನ್ಯಾಂಗ್ ತಾಂತ್ರಿಕ ವಿಶ್ವವಿದ್ಯಾನಿಲಯದ ಉಪಾಧ್ಯಕ್ಷರಾದ ಬಿ.ವಿ.ಆರ್. ಚೌಧರಿರವರು ಘಟಿಕೋತ್ಸವದ ಭಾಷಣ ಮಾಡಲಿದ್ದಾರೆ. ಘಟಿಕೋತ್ಸವ ಪೂರ್ಣಗೊಂಡ ನಂತರ ಮಧ್ಯಾಹ್ನ 3.00 ಗಂಟೆಗೆ ಪಿಹೆಚ್.ಡಿ ಪದವೀಧರರಿಗೆ ಪಿಹೆಚ್.ಡಿ ಪದವಿ ಪ್ರದಾನ ಸಮಾರಂಭವನ್ನು ಹಮ್ಮಿಕೊಂಡಿದ್ದು, ಎಲ್ಲಾ ಮಾನ್ಯ ಸದಸ್ಯರು ಹಾಜರಾಗಿ ಸಮಾರಂಭವನ್ನು ಯಶಸ್ವಿಗೊಳಿಸಬೇಕಾಗಿ ಕೋರಿದರು, ಹಾಗೂ ಕುಲಸಚಿವರು ವಿಷಯವನ್ನು ಮಂಡಿಸಲಿದ್ದಾರೆ ಎಂದು ತಿಳಿಸಿದರು.

ನಂತರ ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳಲಾಯಿತು.

| ವಿಷಯ ಸಂಖ್ಯೆ: | ವಿಷಯ ಸಂಕ್ಷಿಪ್ತವಾಗಿ |
|---|---|
| **1.1** | 99ನೇ ವಾರ್ಷಿಕ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಂಬಂಧ |
| | ಮಾನ್ಯ ಕುಲಸಚಿವರು ಮಾತನಾಡಿ, ದಿನಾಂಕ: 31.01.2019ರಂದು ಜರುಗಿದ ಸಿಂಡಿಕೇಟ್ ಸಭೆಯು ಮೈಸೂರು ವಿಶ್ವವಿದ್ಯಾನಿಲಯದ 99ನೇ ವಾರ್ಷಿಕ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡುವ ಸಂಬಂಧ ಗಣ್ಯ ವ್ಯಕ್ತಿಗಳ ಹೆಸರನ್ನು ಪರಿಶೀಲನ ಸಮಿತಿಗೆ ಸೂಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲಾಗಿತ್ತು ದಿನಾಂಕ 25.02.2019ರಂದು ಜರುಗಿದ ಪರಿಶೀಲನ ಸಮಿತಿಯು ಮೂರು ಮಂದಿ ಗಣ್ಯರ ಹೆಸರುಗಳನ್ನು ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಗಾಗಿ ಕಳುಹಿಸಲಾಗಿತ್ತು. ಘನತೆವೆತ್ತ ಕುಲಾಧಿಪತಿಗಳ ಕಾರ್ಯದರ್ಶಿಗಳು ದಿನಾಂಕ 02.03.2019ರ ಪತ್ರದಲ್ಲಿ ಪೂಜ್ಯ ಮಾತಾ ಅಮೃತಾನಂದಮಯಿ ದೇವಿ ಮತ್ತು ಶ್ರೀ ಶ್ರೀ. ನಿ. ಪ್ರ. ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ, ಈ ಇಬ್ಬರು ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಶಿಫಾರಸ್ಸು ಮಾಡಿರುವ ವಿಷಯವನ್ನು ಸಭೆಯ ಗಮನಕ್ಕೆ ತಂದರು. |
| **ತೀರ್ಮಾನ** | ಪೂಜ್ಯ ಮಾತಾ ಅಮೃತಾನಂದಮಯಿ ದೇವಿ ಮತ್ತು ಶ್ರೀ ಶ್ರೀ. ನಿ. ಪ್ರ. ಕರಿವೃಷಭ ದೇಶಿಕೇಂದ್ರ ಶಿವಯೋಗೀಶ್ವರ ಮಹಾಸ್ವಾಮೀಜಿ, ಈ ಇಬ್ಬರು ಗಣ್ಯರಿಗೆ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಶಿಫಾರಸ್ಸು ಮಾಡಿರುವುದನ್ನು ಶಿಕ್ಷಣ ಮಂಡಳಿ ಸಭೆಯು ಅನುಸಮರ್ಥಿಸಿತು. |
| **1.2** | ದಿನಾಂಕ: 17.03.2019 ರಂದು ಭಾನುವಾರ ನಡೆಯಲಿರುವ 99ನೇ ವಾರ್ಷಿಕ ಘಟಿಕೋತ್ಸವದಲ್ಲಿ ಹಾಜರಿ ಮತ್ತು ಗೈರು ಹಾಜರಿಯಲ್ಲಿ ಪದವಿಗಳನ್ನು ಪಡೆಯಲು ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಅಂಗೀಕರಿಸುವ ಬಗ್ಗೆ. |
| | ಮಾನ್ಯ ಕುಲಪತಿಗಳು, ವಿವಿಧ ನಿಕಾಯಗಳ ಡೀನರುಗಳನ್ನು, ಅವರವರ ನಿಕಾಯಕ್ಕೆ ಸಂಬಂಧಿಸಿದ ವಿವಿಧ ಪದವಿಗಳನ್ನು ಪ್ರದಾನ ಮಾಡುವ ಸಲುವಾಗಿ, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸಭೆಯ ಅನುಮೋದನೆಗಾಗಿ ಮಂಡಿಸುವಂತೆ ತಿಳಿಸಿದರು.<br>"ಕಲಾ/ವಾಣಿಜ್ಯ/ಶಿಕ್ಷಣ/ಕಾನೂನು/ವಿಜ್ಞಾನ ಮತ್ತು ತಂತ್ರಜ್ಞಾನ" ನಿಕಾಯಗಳ ಡೀನರುಗಳು ಅವರವರ ವ್ಯಾಪ್ತಿಗೆ ಬರುವ ವಿವಿಧ ಪದವಿಗಳಿಗೆ ಅರ್ಹರಾದ ಅಭ್ಯರ್ಥಿಗಳ ಪಟ್ಟಿಯನ್ನು ಅನುಮೋದನೆಗಾಗಿ ಸಭೆಯ ಮುಂದೆ ಮಂಡಿಸಿದರು. |
| **ತೀರ್ಮಾನ** | ಕಲಾ/ವಾಣಿಜ್ಯ/ಶಿಕ್ಷಣ/ಕಾನೂನು/ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯಗಳಿಗೆ ಸಂಬಂಧಿಸಿದಂತೆ ಡೀನರು ಮಂಡಿಸಿದ ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ಸರ್ವಾನುಮತದಿಂದ ಒಪ್ಪಿ ಶಿಫಾರಸ್ಸು ಮಾಡಲಾಯಿತು. |

ಅಂತಿಮವಾಗಿ, ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/-
ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು

ಸಹಿ/-
ಕುಲಪತಿಗಳು ಹಾಗೂ ಅಧ್ಯಕ್ಷರು